(ಇಂದು ದಿನಾಂಕ:04-06-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟೀ ಸವಾಲುಃ ಎದುರುದಾರ ನಂ.**3** ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.</u>

1. ನಾನು ಬಿ.ಎಸ್.ಇ. ಬಿ ಎಡ್ ಮತ್ತು ಎಮ್ ಎಸ್ ಸಿ (Master of science) ಪದವಿಧರ. ಅಪಘಾತದ ಸಮಯದಲ್ಲಿ ನಾನು ಅಲಬನೂರು ಪ್ರೌಢ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಈಗ ನಾನು ವಿರುಪಾಪೂರುದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿರುತ್ತೇನೆ. ಅಪಘಾತವು ದಿಃ 07-01-2023 ರಂದು ಆಗಿರುತ್ತದೆ. ಅಪಘಾತದ ಬಗ್ಗೆ ದೂರನ್ನು ಅನೀಲಕುಮಾರ ಇವರು ನೀಡಿರುತ್ತಾರೆ.

2. ಲಾರಿ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಪಿರ್ಯಾದಿಯಲ್ಲಿ ಲಾರಿ ಚಾಲಕನ ಹೆಸರು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೋ.ಸೈ.ನಂ. ಕೆಎ 32 ವಿ 2985 ಇದು ನನ್ನ ಮಾಲೀಕತ್ವದ ವಾಹನ ಇರುತ್ತದೆ. ನನಗೆ ವಾಹನ ಚಾಲನಾ ಪರವಾನಿಗೆ ಇರುತ್ತದೆ, ಅದನ್ನು ನಾನು ಪೋಲೀಸರ ಮುಂದೆ ಹಾಜರಪಡಿಸಿರುತ್ತೇನೆ. ಅಪಘಾತದ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಯಾವ ಕಂಪನಿಯದು ನನಗೆ ಗೊತ್ತಿಲ್ಲ. ನನ್ನ ವಾಹನಕ್ಕೆ ವಿಮೆ ಇರುತ್ತದೆ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಾಹನದ ವಿಮಾ ಕಂಪನಿಯವರನ್ನು ನಾನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಆದ್ದರಿಂದ ಸದರಿ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

3. ಅಪಘಾತದ ನಂತರ ಸರ್ಕಾರಿ ಆಸ್ಪತ್ರೆ ಸಿಂಧನೂರು ಮತ್ತು ಹೆಚ್ಚಿನ ಚಿಕಿತ್ಸೆಯಲ್ಲಿ ವಿಮ್ಸ್ ಬಳ್ಳಾರಿ ಹಾಗೂ ಅಸ್ಟರ ಆಸ್ಪತ್ರೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಸಂಪೂರ್ಣ ಗುಣಮುಖವಾದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಇ.ಎಸ್. ಐ ರವರಿಂದ ವೈದ್ಯಕೀಯ ಖರ್ಚಿನ ಮರುಪಾವತಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುವರ್ಣ ಆರೋಗ್ಯ ಟ್ರಸ್ಟ್ ನಲ್ಲಿ ವೈದ್ಯಕೀಯ ಖರ್ಚಿನ ಮರುಪಾವತಿಗೆ ಅರ್ಜಿ ಸಲ್ಲಿಸಿದ್ದು ಅದನ್ನು ತೀರಸ್ಕರಿಸಿರುತ್ತಾರೆ.

4. ನನಗೆ ವೃತ್ತಿಯಲ್ಲಿ ಹಿಂಬಡ್ತಿ ಮತ್ತು ಮುಂಬಡ್ತಿ ಆಗಿರುವುದಿಲ್ಲ. ನನಗೆ ಪ್ರತಿತಿಂಗಳು ವೇತನ ರೂ.1,11,000/- ಇರುತ್ತದೆ. ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ವೈದ್ಯಕೀಯ ಬಿಲ್ಲುಗಳು ಮತ್ತು ಸಲಹಾ ಚೀಟಿಗಳು ಒಂದಕ್ಕೊಂದು ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಅರ್ಜಿಯನ್ನು ನಾನು ಕಾಲಪರಿಮಿತಿಯಲ್ಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

5. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರ ನಂ.1 ಇವರ ವಾಹನದ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.1 ಮತ್ತು 2 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಎದುರುದಾರ ನಂ.**1** ರವರ ಪರ ಶ್ರೀ ಯು ಕೆ ವಾಯ್ ವಕೀಲರಿಂದ.</u>

ಎದುರುದಾರ ನಂ.1 ರವರ ಪರ ವಕೀಲರು ಎದುರುದಾರ ನಂ.3 ರವರ ಪರ ವಕೀಲರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು